**ಸಾಕ್ಷಿಯನ್ನು ದಿಃ 14.07.2025 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ವಾದಿಯ ಪರ ವಕೀಲರಾದ ಶ್ರೀಮತಿ ಸಿ ಸಿ . ವಕೀಲರಿಂದಃ**

1. ನಾನು 5ನೇ ತರಿಗತಿಯವರೆಗೆ ವಿದ್ಯಾಭ್ಯಾಸ ಮಾಡಿರುತ್ತೇನೆ. ನನಗೆ ದಾಖಲಾತಿಗಳ ಬಗ್ಗೆ ಅಷ್ಟಾಗಿ ಗೊತ್ತಾಗುವುದಿಲ್ಲ. ವಾದಿ ದಾವೆಯನ್ನು ಜಮೀನಿಗಾಗಿ ಹೂಡಿರುತ್ತಾರೆ. ಯಾವ ಕಾರಣಕ್ಕೆ ಎಂದು ಗೊತ್ತಿಲ್ಲ. ವಾದಿ ಸರ್ವೆ ನಂ. 50 ರ 10 ಗುಂಟೆ ವಿಸ್ತೀರ್ಣಕ್ಕೆ ದಾವೆ ಹೂಡಿರುತ್ತಾರೆ. ಸದರಿ ಜಮೀನು ಚೆಕ್ಕುಬಂದಿ ಪೂರ್ವಕ್ಕೆ - ರಸ್ತೆ, ಪಶ್ಚಿಮಕ್ಕೆ- ಜಯಣ್ಣರವರ ಜಮೀನು, ಉತ್ತರಕ್ಕೆ - ಕಲ್ಲಹಳ್ಳಿ ದಾರಿ, ದಕ್ಷಿಣಕ್ಕೆ - ಶಿವರಾಜುರವರ ಜಮೀನು.

2. ನನ್ನ ಪ್ರತಿವಾದ ಪತ್ರದಲ್ಲಿ ಏನು ಬರೆಸಿದ್ದೇನೆ ಎಂದು ನನಗೆ ಅಷ್ಟಾಗಿ ಗೊತ್ತಿಲ್ಲ. ಭಾಗ್ಯಮ್ಮ ಅವರ ಗಂಡ ನಿಂಗೇಗೌಡರವರಿಗೆ ಸರ್ವೆ ನಂ. 50 ರಲ್ಲಿ ಎಷ್ಟು ಸ್ವತ್ತು ಇತ್ತು ಎಂದು ನನಗೆ ಗೊತ್ತಿಲ್ಲ. ಸರ್ವೆ ನಂ. 50 ರಲ್ಲಿ 10 ಗುಂಟೆ ವಿಸ್ತೀರ್ಣ ಮತ್ತು ಸರ್ವೆ ನಂ. 90 ರಲ್ಲಿ 30 ಗುಂಟೆ ವಿಸ್ತೀರ್ಣವನ್ನು ನಿಂಗೇಗೌಡರವರು ನನಗೆ ಮಾರಾಟ ಮಾಡಿರುತ್ತಾರೆ. ಎರಡೂ ಸ್ವತ್ತಿಗೆ ಚೆಕ್ಕುಬಂದಿ ಪೂರ್ವಕ್ಕೆ - ರಸ್ತೆ, ಪಶ್ಚಿಮಕ್ಕೆ- ಜಯಣ್ಣರವರ ಜಮೀನು, ಉತ್ತರಕ್ಕೆ - ಶಿವರಾಜುರವರ ಜಮೀನು., ದಕ್ಷಿಣಕ್ಕೆ - ಕಲ್ಲಹಳ್ಳಿ ದಾರಿ ಇದೆ.

3. ದಿಃ 14.03.2000 ರ ಕ್ರಯಪತ್ರದಲ್ಲಿ ಸರ್ವೆ ನಂ. 50 ರ 10 ಗುಂಟೆ ವಿಸ್ತೀರ್ಣಕ್ಕೆ ಚೆಕ್ಕಬಂಧಿ ಪೂರ್ವಕ್ಕೆ - ಸರ್ಕಾರಿ ಜಮೀನು, ಪಶ್ಚಿಮಕ್ಕೆ- ಬೋರೇಗೌಡರವರ ಜಮೀನು,

ಉತ್ತರಕ್ಕೆ – ಗಣಸೀಗೌಡರ ಜಮೀನು., ದಕ್ಷಿಣಕ್ಕೆ – ರಂಗಮ್ಮನ ಜಮೀನು ಎಂದು ನಮೂದಿಸಲಾಗಿದೆ ಎಂದರೆ ಸರಿಯಲ್ಲ. ಸರ್ವೆ ನಂ. 90 ರಲ್ಲಿ 30 ಗುಂಟೆ ವಿಸ್ತೀರ್ಣಕ್ಕೆ ಚೆಕ್ಕುಬಂಧಿ ಪೂರ್ವಕ್ಕೆ – ಸರ್ಕಾರಿ ರಸ್ತೆ, ಪಶ್ಚಿಮಕ್ಕೆ– ಜಯಣ್ಣರವರ ಜಮೀನು, ಉತ್ತರಕ್ಕೆ – ಶಿವರಾಜುರವರ ಜಮೀನು., ದಕ್ಷಿಣಕ್ಕೆ – ವಾದಿಯ ಗಂಡ ನಿಂಗೇಗೌಡ ಉಃ ಚಂದ್ರೇಗೌಡರವರ ಜಮೀನು ಎಂದರೆ ಸಾಕ್ಷಿ ದಕ್ಷಿಣಕ್ಕೆ ನಮ್ಮದೇ ಜಮೀನು ಎನ್ನುತ್ತಾರೆ.

4. ನಾನು ವಾದಿ ಗಂಡನಿಂದ ಸದರಿ ಸ್ವತ್ತನ್ನು ಖರೀದಿಸುವ ಮೊದಲು ವಾದಿಯ ಗಂಡನಿಗೆ ಹೇಗೆ ಬಂದಿದೆ ಎಂದು ತಿಳಿದುಕೊಂಡಿಲ್ಲ. ವಾದಿಯ ಗಂಡನಿಗೆ ಸರ್ಕಾರದಿಂದ ಕೆಲವು ಸ್ವತ್ತುಗಳು ಮಂಜೂರಾಗಿದ್ದ ಬಗ್ಗೆ ಗೊತ್ತಿಲ್ಲ. ವಾದಿಯ ಗಂಡನಿಗೆ ಸರ್ವೆ ನಂ. 50 ಬ್ಲಾಕ್ 1 ರಲ್ಲಿ 15 ಗುಂಟೆ ಮತ್ತು ಸರ್ವೆ ನಂ. 50 ಬ್ಲಾಕ್ 2 ರಲ್ಲಿ 20 ಗುಂಟೆಯಂತೆ ಒಟ್ಟು 35 ಗುಂಟೆ ಸರ್ಕಾರದಿಂದ ಮಂಜೂರಾಗಿತ್ತು ಎಂದರೆ ಸರಿಯಲ್ಲ. ನನ್ನ ಪ್ರತಿವಾದ ಪತ್ರದಲ್ಲಿ 4 ಗುಂಟೆ ವಿಸ್ತೀರ್ಣದ ಸರ್ಕಾರಿ ಜಮೀನಿನಲ್ಲಿ ನಾವೇ ಸ್ವಾಧೀನದಲ್ಲಿದ್ದೇವೆ ಎಂದು ಅರ್ಜಿ ಸಲ್ಲಿಸಿದ್ದು ಅದನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದೇವೆ. 10 ಗುಂಟೆ ವಿಸ್ತೀರ್ಣಕ್ಕೆ ಸಂಬಂಧಿಸಿದಂತೆ ಪಹಣಿ ಪತ್ರಗಳನ್ನು ನ್ಯಾಯಲಯಕ್ಕೆ ಹಾಜರುಪಡಿಸಿರುತ್ತೇನೆ. 10 ಗುಂಟೆ ವಿಸ್ತೀರ್ಣಕ್ಕೆ ಸಂಬಂಧಿಸಿದಂತೆ ಗಣಕೀಕೃತ ಪಹಣಿ ಪತ್ರಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ.

5. 4–5 ಗುಂಟೆ ವಿಸ್ತೀರ್ಣದ ಜಮೀನಿನಲ್ಲಿ ನಾವೇ ಸ್ವಾಧೀನದಲ್ಲಿದ್ದೇವೆ ಎಂದು ನ್ಯಾಯಲಯಕ್ಕೆ ಯಾವುದೇ ದಾಖಲೆಗಳನ್ನು ನೀಡಿಲ್ಲ. ವಾದಿಯ ಹೆಸರಿನಲ್ಲಿ ಒಟ್ಟು 35 ಗಂಟೆ ವಿಸ್ತೀರ್ಣದ ಪಹಣಿ ಪತ್ರಿಕೆ ಬರೆದಿರುವ ಬಗ್ಗೆ ಗೊತ್ತಿಲ್ಲ. ವಾದಿ ನ್ಯಾಯಲಯಕ್ಕೆ ಯಾವ

ದಾಖಲೆಗಳನ್ನು ನೀಡಿದ್ದಾರೆ ಎಂದು ಗೊತ್ತಿಲ್ಲ. ದಾವಾ ಸ್ವತ್ತಿನ ಉತ್ತರಕ್ಕೆ – ನಾನು ಖರೀದಿ ಮಾಡಿದ 10 ಗುಂಟೆ ವಿಸ್ತೀರ್ಣ ಇದೆ ಎಂದರೆ ಸಾಕ್ಷಿ ಯಾವುದೇ ಜಮೀನು ಇಲ್ಲ ಎನ್ನುತ್ತಾರೆ. ದಾವಾ ಸ್ವತ್ತಿನಲ್ಲಿ ನಿಂಗೇಗೌಡರವರು ಸ್ವಾಧೀನದಲ್ಲಿದ್ದು ಅವರ ಪೌತಿ ನಂತರ ಅವರ ಹೆಂಡತಿ ಮತ್ತು ಮಕ್ಕಳು ಸ್ವಾಧೀನದಲ್ಲಿದ್ದಾರೆ ಎಂದರೆ ಸರಿಯಲ್ಲ. ನಿಂಗೇಗೌಡರವರಿಗೆ ಮಂಜೂರಾಗಿದ್ದ ಒಟ್ಟು 35 ಗುಂಟೆ ವಿಸ್ತೀರ್ಣದ ಪೈಕಿ 15 ಗುಂಟೆ ವಿಸ್ತೀರ್ಣ ನಮ್ಮ ಜಮೀನಿನ ದಕ್ಷಿಣಕೆ ಇದೆ ಎಂದರೆ ಸರಿಯಲ್ಲ. ಸದರಿ ಸ್ವತ್ತಿನಲ್ಲಿ ವಾದಿಯರು ಸ್ವಧೀನಾನುಭುವದಲ್ಲಿದ್ದರೂ ನಾನೇ ಅವರಿಗೆ ತಂಟೆ ತಕರಾರು ಮಾಡುತ್ತಿದ್ದೆವು ಎಂದರೆ ಸರಿಯಲ್ಲ. ನಾನು 4–5 ಗುಂಟೆ ಸರ್ಕಾರಿ ಜಮೀನು ಇಲ್ಲ ಮತ್ತು ನಾನು ಸ್ವಾಧೀನದಲ್ಲಿ ಇಲ್ಲ ಎಂದರೆ ಸರಿಯಲ್ಲ.

6. ನಾವು ತೊಂದರೆ ನೀಡುತ್ತಿದ್ದೆವು ಎಂದು ವಾದಿ ಪೊಲೀಸ್ ಠಾಣೆಯಲ್ಲಿ ದೂರು ನೀಡಿದ್ದರು ಎಂದರೆ ಸರಿಯಲ್ಲ. ವಾದಿಯರಿಗೆ ತೊಂದರೆ ನೀಡಿದ್ದರಿಂದಲೇ ವಾದಿಯ ದಾವೆ ಹೂಡಿರುತ್ತಾರೆ ಎಂದರೆ ಸರಿಯಲ್ಲ. ವಾದಿ ಮತ್ತು ಅವರ ಮಕ್ಕಳು ದಾವಾ ಸ್ವತ್ತಿನಲ್ಲಿ ಶಾಂತಿಯುತ ಸ್ವಧೀನದಲ್ಲಿದ್ದರೂ ನಾವೇ ತೊಂದರೆ ನೀಡುತ್ತಿದ್ದೆವು ಎಂದರೆ ಸರಿಯಲ್ಲ.

ಮರು ವಿಚಾರಣೆ ಃ ಇಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕೃತ ಮಾಡಲಾಗಿದೆ.)

ಓ ಹೇ ಕೇ ಸರಿ ಇದೆ.

**(ಕುಸುಮ ವಿ.)**
**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು**
**ಜೆ.ಎಂ.ಎಫ್.ಸಿ, ಚನ್ನರಾಯಪಟ್ಟಣ.**